<u>1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ</u>

<u>Spl.C.181/2017</u>

ದಿಃ 03.04.2024
(ಸಾಕ್ಷಿಗೆ ಪ್ರಮಾಣವಚನವನ್ನು ಬೋಧಿಸಲಾಯಿತು)

Cw-25 Pw-10

| | | |
|---|---|---|
| ಹೆಸರು | ಃ | ಡಾ. ಪುನೀತ ಆರ್ |
| ಗಂಡನ ಹೆಸರು | ಃ | ಡಾ. ಶಿವಣ್ಣ ಎಂ ಜಿ |
| ವಯಸ್ಸು | ಃ | 40 ವರ್ಷ |
| ಉದ್ಯೋಗ | ಃ | ಪ್ರೊಫೆಸರ್, ರಾಜರಾಜೇಶ್ವರಿ ಮೆಡಿಕಲ್ ಕಾಲೇಜು ಮತ್ತು ಆಸ್ಪತ್ರೆ, ಬೆಂಗಳೂರು |
| ವಾಸಸ್ಥಳ | ಃ | ಬೆಂಗಳೂರು |

<u>ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ</u>

1. ಸನ್ 2015ರ ಸೆಪ್ಟೆಂಬರ್ ಮಾಹೆಯಿಂದ ಈವರೆಗೆ ನಾನು ರಾಜರಾಜೇಶ್ವರಿ ವೈದ್ಯಕೀಯ ಮಹಾವಿದ್ಯಾಲಯದ ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿಣಿ ಎಂದು ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. 28 ವರ್ಷ ವಯಸ್ಸಿನ ಮೃತ ಹೇಮಂತ್ ಕುಮಾರ್ ಉಃ ಸ್ವಾಮಿ ಎಂ ಸಿ ಎಂಬಾತನ ಮೃತದೇಹದ ಪರೀಕ್ಷೆಯನ್ನು ಮಾಡಲು ತಾವರೆಕೆರೆ ಪೊಲೀಸರು ಒಂದು ಮನವಿ ಪತ್ರವನ್ನು ದಿಃ30.08.2017ರಂದು ಮಧ್ಯಾಹ್ನ 12.30ರ ಸಮಯದಲ್ಲಿ

ಕಳುಹಿಸಿದ್ದರ ಕಾರಣ, ಅದೇ ದಿನ ಮಧ್ಯಾಹ್ನ 12.35 ರಿಂದ 1.35 ರವರೆಗೆ ಸದರಿ ಶವದ ಪರೀಕ್ಷೆಯನ್ನು ನಾನು ಮಾಡಿರುತ್ತೇನೆ.

3. ಸದರಿ ಶವವನ್ನು ಬಾಹ್ಯವಾಗಿ ಪರೀಕ್ಷಿಸಿ ನೋಡಲಾಗಿ ಆತನ ಮೈಮೇಲೆ ರಕ್ತಖಚಿತವಾಗಿದ್ದ, ವೈಲೆಟ್ ಬಣ್ಣದ ತುಂಬುತೋಳಿನ ಒಂದು ಶರ್ಟ್ ಹರಿದಿದ್ದು, ಒಂದು ಬಿಳಿ ಬಣ್ಣದ ಹಾಫ್ ಬನಿಯನ್ ಹರಿದಿದ್ದು, ಒಂದು ಬೂದು ಬಣ್ಣದ ಜೀನ್ಸ್ ಪ್ಯಾಂಟ್ ಹರಿದಿದ್ದು ಮತ್ತು ತಿಳಿನೀಲಿ ಬಣ್ಣದ ಅಂಡರ್‌ವೇರ್‌ಗಳು ಇದ್ದವು.

4. ಆತನ ಬಲಗೈ ಮೇಲೆ ಎಂ ಜೆ ಸಿ ಆರ್ ಎಂಬ ಆಂಗ್ಲಭಾಷೆಯ 4 ಅಕ್ಷರಗಳ ಹಚ್ಚೆ ಇದ್ದಿದ್ದು ಅಲ್ಲದೇ, ಆತನ ಬೆನ್ನಿನಲ್ಲಿ ರಕ್ತ ಸಂಗ್ರಹವಾಗಿರುವ ಕಲೆಗಳು ಕಂಡುಬಂದಿದ್ದಲ್ಲದೇ, ಮುಖದ ಮೇಲೆ ಒಣಗಿದ ರಕ್ತದ ಕಲೆಗಳು ಮತ್ತು ಆತನ ಬಲಕಿವಿ ಮತ್ತು ಮೂಗಿನಿಂದ ರಕ್ತಸ್ರಾವ ಕಂಡುಬಂದಿರುತ್ತದೆ.

5. ಆತನ ಎದೆಯ ಹೊರಭಾಗದಲ್ಲಿ, ಹೊಟ್ಟೆಯ ಬಲಭಾಗದಲ್ಲಿ, ಬಲಕಂಕುಳಲ್ಲಿ, ಬಲತೋಳಿನ ಹಿಂಭಾಗದಲ್ಲಿ, ಎದೆಯ ಎಡಹೊರಭಾಗದಲ್ಲಿ, ಮತ್ತು ಎರಡೂ ತೊಡೆಗಳ ಒಳಭಾಗದಲ್ಲಿ ಇರುವೆಗಳ ಕಡಿತದಿಂದ ಆದ ಗುರುತುಗಳು ಮತ್ತು ಜೀವಂತ ಇರುವೆಗಳು ಅಲ್ಲಲ್ಲಿ ಓಡಾಡುವುದನ್ನು ಕಂಡುಬಂದಿರುತ್ತದೆ.

6. ಬಾಹ್ಯ ಗಾಯಗಳು ಈ ಕೆಳಗಿನಂತೆ ಕಂಡುಬಂದಿರುತ್ತವೆಃ

ಎ) 7X1 ಸೆಂಟೀ ಮೀಟರ್‌ನಷ್ಟು ಆತನ ಎಡತಲೆಯ ಹೊರಭಾಗದಲ್ಲಿ ಬುರುಡೆಯ ಆಳಕ್ಕೆ ಹರಿದ ಗಾಯವನ್ನು ಕಂಡಿರುತ್ತೇನೆ.

ಬಿ) 4X2 ಸೆಂಟೀ ಮೀಟರ್‌ನಷ್ಟು ಆತನ ಎಡಹುಬ್ಬಿನ ಮೇಲೆ ತರಚಿದ ಗಾಯವನ್ನು ಕಂಡಿರುತ್ತೇನೆ.

ಸಿ) 2X1 ಸೆಂಟೀ ಮೀಟರ್‌ನಷ್ಟು ಆತನ ಎಡಹುಬ್ಬಿನ ಹೊರವಲಯದಲ್ಲಿ ಮೂಳೆಯ ಆಳಕ್ಕೆ ಹರಿದ ಗಾಯ ಕಂಡಿರುತ್ತೇನೆ.

ಡಿ) 6X5 ಸೆಂಟೀ ಮೀಟರ್‌ನಷ್ಟು ತರಚಿದ ಗಾಯವನ್ನು ಆತನ ಎಡಕಣ್ಣಿನ ಕೆಳಭಾಗದಲ್ಲಿ ಕಂಡಿರುತ್ತೇನೆ.

ಇ) 4X1 ಸೆಂಟೀ ಮೀಟರ್‌ನಷ್ಟು ಹರಿದ ಗಾಯವನ್ನು ಮೂಳೆಯ ಆಳಕ್ಕೆ ಆತನ ಗದ್ದದ ಮೇಲೆ ಕಂಡಿರುತ್ತೇನೆ.

7. ಸದರಿ ಶವವನ್ನು ಛೇಧಿಸಿ ನೋಡಲಾಗಿ ಈ ಕೆಳಕಂಡಂತೆ ಆಂತರಿಕ ಗಾಯಗಳು ಕಂಡುಬಂದಿರುತ್ತವೆಃ

**ಎ)** ಆತನ ಕತ್ತಿನ ಬಲಭಾಗದ ಮಾಂಸಖಂಡಗಳಲ್ಲಿ ರಕ್ತಶೇಖರಣೆಯಾಗಿದ್ದು ಕಂಡುಬಂದಿರುತ್ತದೆ.

**ಬಿ)** ಆತನ ತಲೆಯ ಕೆಳಹಿಂಭಾಗದಲ್ಲಿ 14X4 ಸೆಂಟೀ ಮೀಟರ್‌ನಷ್ಟು ಬಲಭಾಗದಲ್ಲಿ ರಕ್ತಶೇಖರಣೆಯಾಗಿದ್ದು ಕಂಡಿದ್ದಲ್ಲದೇ, ಮೇಲ್ಭಾಗದಲ್ಲಿ 14X8 ಸೆಂಟೀ ಮೀಟರ್‌ನಷ್ಟು ರಕ್ತಶೇಖರಣೆಯಾಗಿದ್ದು ಕಂಡುಬಂದಿದ್ದು, ಎಡಭಾಗದ ತಲೆಯ ಹಿಂದಿನ ಕೆಳಭಾಗದಲ್ಲಿ ಮಾಂಸ ಊತದಿಂದ ಕೂಡಿದ್ದು ಕಂಡುಬಂದಿರುತ್ತದೆ.

**ಸಿ)** ಆತನ ತಲೆಬುರುಡೆಯ ಹಿಂದಿನ ಎಡ ಮೇಲ್ಭಾಗದಲ್ಲಿ 3 ಸೆಂಟೀ ಮೀಟರ್‌ನಷ್ಟು ಮೂಳೆ ಮುರಿತ ಕಂಡುಬಂದಿರುತ್ತದೆ.

**ಡಿ)** ಆತನ ತಲೆಬುರುಡೆಯ ಮಧ್ಯ ಮತ್ತು ಹಿಂದಿನ ಬಲಭಾಗದಲ್ಲಿ ಬುರುಡೆಯ ಮೂಳೆ ಮುರಿತದ ಲಕ್ಷಣಗಳು ಕಂಡುಬಂದಿರುತ್ತದೆ.

**ಇ)** ತಲೆಬುರುಡೆಯ ಒಳಗೆ ಎಡಭಾಗದಲ್ಲಿ ಮೂಳೆ ಮುರಿತದ ಲಕ್ಷಣಗಳು ಕಂಡುಬಂದಿರುತ್ತದೆ.

**ಎಫ್)** ಮೂಳೆ ಮುರಿತವಾದ ಪ್ರದೇಶದಲ್ಲಿ ಮೆನೆಂಜಸ್ ಕಂಡುಬಂದಿದ್ದಲ್ಲದೇ, ಮೆದುಳಿನಲ್ಲಿ ರಕ್ತಸ್ರಾವವಾಗಿದ್ದೂ ಸಹ ಕಂಡುಬಂದಿರುತ್ತದೆ.

**ಜಿ)** ಆತನ ಕುಪ್ಪುಸದ ಎಡಭಾಗದಲ್ಲಿ 16X7 ಸೆಂಟೀ ಮೀಟರ್‌ನಷ್ಟು ಊತದಿಂದ ಕೂಡಿದ ಗಾಯ ಕಂಡಿರುತ್ತೇನೆ.

**ಹೆಚ್)** ಆತನ ಕೆಳದವಡೆಯ ಮೂಳೆಯಲ್ಲಿ ಬಹುಮುರಿತದ ಲಕ್ಷಣಗಳು ಕಂಡುಬಂದಿದ್ದಲ್ಲದೇ ಹಲ್ಲುಗಳ ಡಿಸ್‌ಲೊಕೇಷನ್ ಕೂಡ ಕಂಡುಬಂದಿರುತ್ತದೆ.

8. ಇನ್ನುಳಿದ ಎಲ್ಲಾ ಒಳ ಆವಯವಗಳು ಸುಸ್ಥಿತಿಯಲ್ಲಿದ್ದು, ರಕ್ತ, ಹೊಟ್ಟೆಯಲ್ಲಿ ಲಭ್ಯವಿದ್ದ ವಸ್ತು, ಮತ್ತು ಯಕ್ರುಥಿನ ಸ್ವಲ್ಪ ಭಾಗ ಹಾಗೂ ಎರಡೂ ಮೂತ್ರಪಿಂಡಗಳ ತುಣುಕುಗಳನ್ನು ಶೇಖರಿಸಿಕೊಂಡು, ಪ್ಯಾಕ್ ಮಾಡಿ, ಸೀಲ್ ಮಾಡಿ ಅವುಗಳನ್ನು ರಾಸಾಯನಿಕ ಪರೀಕ್ಷೆಗೋಸ್ಕರ ಎಫ್.ಎಸ್.ಎಲ್.ಗೆ ಕಳುಹಿಸಲು ಪೊಲೀಸರಿಗೆ ಹಸ್ತಾಂತರಿಸಿರುತ್ತೇನೆ.

9. ಸದರಿ ಮೃತದೇಹದ ಮೇಲೆ ಇದ್ದ ಬಟ್ಟೆಗಳನ್ನೂ ಸಹ ಪ್ಯಾಕ್ ಮಾಡಿ, ಸೀಲ್ ಮಾಡಿ ಪೊಲೀಸರಿಗೆ ಹಸ್ತಾಂತರಿಸಿರುತ್ತೇನೆ.

10. ಮೇಲೆ ಹೇಳಿದ ಎಲ್ಲಾ ಗಾಯಗಳು ಮರಣಪೂರ್ವದಲ್ಲಿ ಆದ ತಾಜಾ ಸ್ವರೂಪದ ಗಾಯಗಳು ಆಗಿದ್ದವು.

11. ಗಾಯಗಳಿಂದ ಆದ ರಕ್ತಸ್ರಾವ ಮತ್ತು ಆಘಾತದಿಂದ ಸದರಿ ವ್ಯಕ್ತಿಯ ಸಾವು ಸಂಭವಿಸಿರುತ್ತದೆ ಎಂದು ನಾನು ಅಭಿಪ್ರಾಯಪಟ್ಟಿರುತ್ತೇನೆ.

12. ಅದಕ್ಕನುಗುಣವಾಗಿ ಒಂದು ಸವಿವರವಾದ ಶವಪರೀಕ್ಷಾ ವರದಿಯನ್ನು ನೀಡಿದ್ದು, ಅದನ್ನು ಈಗ ನೋಡಿ ಗುರುತಿಸುತ್ತಿರುವುದರಿಂದ, ಅದನ್ನು ನಿ.ಪಿ.22 ಎಂದು, ಮತ್ತು ಅದರ

ಮೇಲಿರುವ ನನ್ನ ಸಹಿಯನ್ನು ನಿ.ಪಿ.22(ಎ) ಎಂದು ಗುರುತಿಸಲಾಯಿತು.

13. ಶವದ ಮೇಲಿದ್ದ ಬಟ್ಟೆಗಳನ್ನು ಈಗ ನೋಡಿ ಗುರುತಿಸುತ್ತಿದ್ದು, ಅವುಗಳನ್ನು ಈಗಾಗಲೇ ಮು.ಮಾ.4ರಿಂದ 7 ಎಂದು ಗುರುತಿಸಿದ್ದು ಇರುತ್ತವೆ.

14. ಈಗ ತೋರಿಸಿದ ಮು.ಮಾ.1 ಕಾಡುಜಾತಿಯ ಕಲ್ಲು ಎತ್ತಿಹಾಕಿದಲ್ಲಿ ಅದರ ಭಾಗ ತಗುಲಿ ಮೇಲೆ ಹೇಳಿದ ಗಾಯಗಳು ಆಗುವ ಸಾಧ್ಯತೆ ಉಂಟು.

<u>ಪಾಟೀ ಸವಾಲುಃ ಶ್ರೀ. ಟಿ.ಜಿ., ವಕೀಲರಿಂದ 2ನೇ ಆರೋಪಿಯ ಪರವಾಗಿಃ</u>

15. ಸದರಿ ಶವದ ಪರೀಕ್ಷೆಯನ್ನು ಮಾಡುವುದಕ್ಕಿಂತ ಮುಂಚೆ ಅದು ನಮ್ಮ ಆಸ್ಪತ್ರೆಯಲ್ಲಿನ ಕೋಲ್ಡ್ ಸ್ಟೋರೇಜ್‌ನಲ್ಲಿ ಇತ್ತು ಎನ್ನುವುದು ಸರಿ.

16. ಕೋಲ್ಡ್ ಸ್ಟೋರೇಜ್‌ನಲ್ಲಿ ಶವ ಇಟ್ಟಾಗ ಅದರ ನಿಖರವಾದ ಸಾವಿನ ಸಮಯ ಹೇಳಲು ಬರುವುದಿಲ್ಲ ಎನ್ನುವುದು ಸರಿ.

17. ಕೋಲ್ಡ್ ಸ್ಟೋರೇಜ್‌ನಲ್ಲಿ ಶವ ಇಟ್ಟಿದ್ದರಿಂದ ಅದರ ಮೈಮೇಲೆ ಇದ್ದ ಗಾಯಗಳು ತಾಜಾ ಸ್ವರೂಪದ್ದು ಎಂದು ಹೇಳಲು ಸಾಧ್ಯವಿಲ್ಲ ಎನ್ನುವುದು ಸರಿಯಲ್ಲ.

18. ಇಂತಹುದೇ ಆಯುಧದಿಂದ ಸದರಿ ಗಾಯಗಳು ಆಗಿರುತ್ತವೆ ಮತ್ತು ಸಾವು ಸಂಭವಿಸಿರುತ್ತದೆ ಎಂದು ನಾನು ನನ್ನ ಅಭಿಪ್ರಾಯವನ್ನು ನಿ.ಪಿ.22 ರಲ್ಲಿ ಹೇಳಿರುವುದಿಲ್ಲ ಎನ್ನುವುದು ಸರಿ.

19. ಪೊಲೀಸರು ನನಗೆ ಯಾವುದೇ ವಸ್ತುಗಳನ್ನು ತೋರಿಸಿ ನನ್ನ ಅಭಿಪ್ರಾಯ ವರದಿಯನ್ನು ಪಡೆದುಕೊಂಡಿರುವುದಿಲ್ಲ ಎನ್ನುವುದು ಸರಿ.

20. ಒಬ್ಬ ವ್ಯಕ್ತಿ ಮದ್ಯಸೇವನೆ ಮಾಡಿ ಅಮಲಿನಲ್ಲಿ 10-15 ಅಡಿಗಳ ಎತ್ತರದಿಂದ ಕಲ್ಲಿನ ಮೇಲೆ ಬಿದ್ದಲ್ಲಿ ಮೇಲೆ ಹೇಳಿದ ಗಾಯಗಳು ಆಗುವ ಸಾಧ್ಯತೆ ಉಂಟು ಎನ್ನುವುದು ಸರಿ.

21. 25 ರಿಂದ 30 ಕೆಜಿ ಭಾರದ ಕಲ್ಲನ್ನು ಎತ್ತಿ ಒಬ್ಬ ವ್ಯಕ್ತಿಯ ತಲೆಯ ಮೇಲೆ ಹಾಕಿದಲ್ಲಿ ತಲೆಬುರುಡೆ ಸಂಪೂರ್ಣವಾಗಿ ಜಜ್ಜಿ ಹೋಗುತ್ತದೆ ಎನ್ನುವುದು ಸರಿ.

22. ಅಂತಹ ಸಂದರ್ಭದಲ್ಲಿ ರಕ್ತ, ಮಾಂಸ ಮತ್ತು ಚರ್ಮ ಆ ಕಲ್ಲಿಗೆ ಅಂಟಿಕೊಳ್ಳುತ್ತದೆ ಎನ್ನುವುದು ಸರಿ.

23. ಪೊಲೀಸರ ಮಾತು ಕೇಳಿ ಅವರ ಅನುಕೂಲಕ್ಕೆ ತಕ್ಕಂತೆ ನಿ.ಪಿ.22ನ್ನು ನೀಡಿ, ಅದಕ್ಕನುಗುಣವಾಗಿ ಈಗ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

24. 28 ವರ್ಷ ವಯಸ್ಸಿನ ಮೃತ ಹೇಮಂತ್ ಕುಮಾರ್ ಉಃ ಸ್ವಾಮಿ ಎಂ ಸಿ ಎಂಬಾತನ ಮೃತದೇಹದ ಪರೀಕ್ಷೆಯನ್ನು ಮಾಡಲು ತಾವರೆಕೆರೆ ಪೊಲೀಸರು ಒಂದು ಮನವಿ ಪತ್ರವನ್ನು ದಿಃ30.08.2017ರಂದು ಮಧ್ಯಾಹ್ನ 12.30ರ ಸಮಯದಲ್ಲಿ ಕಳುಹಿಸಿದ್ದರ ಕಾರಣ, ಅದೇ ದಿನ ಮಧ್ಯಾಹ್ನ 12.35ರಿಂದ 1.35ರವರೆಗೆ ಸದರಿ ಶವದ ಪರೀಕ್ಷೆಯನ್ನು ನಾನು ಮಾಡಿರುತ್ತೇನೆ, ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

25. ಸದರಿ ಶವವನ್ನು ಬಾಹ್ಯವಾಗಿ ಪರೀಕ್ಷಿಸಿ ನೋಡಲಾಗಿ ಆತನ ಮೈಮೇಲೆ ರಕ್ತಖಚಿತವಾಗಿದ್ದ, ವೈಲೆಟ್ ಬಣ್ಣದ ತುಂಬುತೋಳಿನ ಒಂದು ಶರ್ಟ್ ಹರಿದಿದ್ದು, ಒಂದು ಬಿಳಿ ಬಣ್ಣದ ಹಾಫ್ ಬನಿಯನ್ ಹರಿದಿದ್ದು, ಒಂದು ಬೂದು ಬಣ್ಣದ ಜೀನ್ಸ್ ಪ್ಯಾಂಟ್ ಹರಿದಿದ್ದು ಮತ್ತು ತಿಳಿನೀಲಿ ಬಣ್ಣದ ಅಂಡರ್‌ವೇರ್‌ಗಳು ಇದ್ದವು, ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

26. ಆತನ ಬಲಗೈ ಮೇಲೆ ಎಂ ಜೆ ಸಿ ಆರ್ ಎಂಬ ಆಂಗ್ಲಭಾಷೆಯ 4 ಅಕ್ಷರಗಳ ಹಚ್ಚೆ ಇದ್ದಿದ್ದು ಅಲ್ಲದೇ, ಆತನ ಬೆನ್ನಿನಲ್ಲಿ ರಕ್ತ ಸಂಗ್ರಹವಾಗಿರುವ ಕಲೆಗಳು ಕಂಡುಬಂದಿದ್ದಲ್ಲದೇ, ಮುಖದ ಮೇಲೆ ಒಣಗಿದ ರಕ್ತದ ಕಲೆಗಳು ಮತ್ತು ಆತನ ಬಲಕಿವಿ ಮತ್ತು ಮೂಗಿನಿಂದ ರಕ್ತಸ್ರಾವ ಕಂಡುಬಂದಿರುತ್ತದೆ, ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

27. ಆತನ ಎದೆಯ ಹೊರಭಾಗದಲ್ಲಿ, ಹೊಟ್ಟೆಯ ಬಲಭಾಗದಲ್ಲಿ, ಬಲಕಂಕುಳಲ್ಲಿ, ಬಲತೋಳಿನ ಹಿಂಭಾಗದಲ್ಲಿ, ಎದೆಯ ಎಡಹೊರಭಾಗದಲ್ಲಿ, ಮತ್ತು ಎರಡೂ ತೊಡೆಗಳ ಒಳಭಾಗದಲ್ಲಿ ಇರುವೆಗಳ ಕಡಿತದಿಂದ ಆದ ಗುರುತುಗಳು ಮತ್ತು ಜೀವಂತ ಇರುವೆಗಳು ಅಲ್ಲಲ್ಲಿ ಓಡಾಡುವುದನ್ನು ಕಂಡುಬಂದಿರುತ್ತದೆ, ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

28. ನಿ.ಪಿ.22 ರಲ್ಲಿ ಕಾಣಿಸಿರುವಂತೆ ಒಳ ಮತ್ತು ಹೊರ ಗಾಯಗಳು ಆಗಿರುತ್ತವೆ, ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

29. ಇನ್ನುಳಿದ ಎಲ್ಲಾ ಒಳ ಅವಯವಗಳು ಸುಸ್ಥಿತಿಯಲ್ಲಿದ್ದು, ರಕ್ತ, ಹೊಟ್ಟೆಯಲ್ಲಿ ಲಭ್ಯವಿದ್ದ ವಸ್ತು, ಮತ್ತು ಯಕ್ರುಥಿನ ಸ್ವಲ್ಪ ಭಾಗ

ಹಾಗೂ ಎರಡೂ ಮೂತ್ರಪಿಂಡಗಳ ತುಣುಕುಗಳನ್ನು ಶೇಖರಿಸಿಕೊಂಡು, ಪ್ಯಾಕ್ ಮಾಡಿ, ಸೀಲ್ ಮಾಡಿ ಅವುಗಳನ್ನು ರಾಸಾಯನಿಕ ಪರೀಕ್ಷೆಗೋಸ್ಕರ ಎಫ್.ಎಸ್.ಎಲ್.ಗೆ ಕಳುಹಿಸಲು ಪೊಲೀಸರಿಗೆ ಹಸ್ತಾಂತರಿಸಿರುತ್ತೇನೆ, ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

30. ಸದರಿ ಮೃತದೇಹದ ಮೇಲೆ ಇದ್ದ ಬಟ್ಟೆಗಳನ್ನೂ ಸಹ ಪ್ಯಾಕ್ ಮಾಡಿ, ಸೀಲ್ ಮಾಡಿ ಪೊಲೀಸರಿಗೆ ಹಸ್ತಾಂತರಿಸಿರುತ್ತೇನೆ, ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

31. ಮೇಲೆ ಹೇಳಿದ ಎಲ್ಲಾ ಗಾಯಗಳು ಮರಣಪೂರ್ವದಲ್ಲಿ ಆದ ತಾಜಾ ಸ್ವರೂಪದ ಗಾಯಗಳು ಆಗಿದ್ದವು, ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

32. ಗಾಯಗಳಿಂದ ಆದ ರಕ್ತಸ್ರಾವ ಮತ್ತು ಆಘಾತದಿಂದ ಸದರಿ ವ್ಯಕ್ತಿಯ ಸಾವು ಸಂಭವಿಸಿರುತ್ತದೆ ಎಂದು ನಾನು ಅಭಿಪ್ರಾಯಪಟ್ಟಿರುತ್ತೇನೆ, ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

33. ಅದಕ್ಕನುಗುಣವಾಗಿ ಒಂದು ಸವಿವರವಾದ ಶವಪರೀಕ್ಷಾ ವರದಿಯನ್ನು ನೀಡಿರುತ್ತೇನೆ, ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

34. ಶವದ ಮೇಲಿದ್ದ ಬಟ್ಟೆಗಳನ್ನು ಈಗ ನೋಡಿ ಗುರುತಿಸುತ್ತಿದ್ದು, ಅವುಗಳನ್ನು ಈಗಾಗಲೇ ಮು.ಮಾ.4ರಿಂದ 7 ಎಂದು ಗುರುತಿಸಿದ್ದು ಇರುತ್ತವೆ, ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

35. ಈಗ ತೋರಿಸಿದ ಮು.ಮಾ.1 ಕಾಡುಜಾತಿಯ ಕಲ್ಲು ಎತ್ತಿಹಾಕಿದಲ್ಲಿ ಅದರ ಭಾಗ ತಗುಲಿ ಮೇಲೆ ಹೇಳಿದ ಗಾಯಗಳು ಆಗುವ ಸಾಧ್ಯತೆ ಉಂಟು, ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

<u>ಪಾಟೀ ಸವಾಲುಃ ಶ್ರೀ. ಬಿ.ಹೆಚ್.ಸಿ.ಕೆ., ಮತ್ತು ಡಿ.ಎನ್.ಹೆಚ್., ವಕೀಲರಿಂದ 1 ಮತ್ತು 3ನೇ ಆರೋಪಿತರ ಪರವಾಗಿಃ ಮೇಲಿನ ಪಾಟೀ ಸವಾಲನ್ನೇ ಅಳವಡಿಸಿಕೊಂಡಿರುತ್ತಾರೆ.</u>

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಜಿ ಡಿ ಮಹಾವರ್ಕರ್)
1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು/
ವಿಶೇಷ ನ್ಯಾಯಾಧೀಶರು,
ರಾಮನಗರ.